ಅಂಚೆ ಇಲಾಖೆಯ ರೈಲ್ವೆ ಮೇಲ್ ಸರ್ವಿಸ್ ವಿಭಾಗದಲ್ಲಿ ಅರಸೀಕೆರೆ, ತುಮಕೂರು, ಮೈಸೂರು, ಮಡಿಕೇರಿ ಹಾಗೂ ಬೆಂಗಳೂರಿನಲ್ಲಿ ಕೆಲಸ ನಿರ್ವಹಿಸಿದ ಕೆ.ಕೆ. ಗಂಗಾಧರನ್ ಅವರ ಅನುಭವದ ಬುತ್ತಿ ದೊಡ್ಡದು. ಹುಟ್ಟಿದ್ದು ಕಾಸರಗೋಡಿನ ಪಾತನಡ್ಕದಲ್ಲಿ. ಕೊಡಗಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪಡೆದರು. ಬರವಣಿಗೆ ಅವರ ಸಂಗಾತಿ. ಮಲಯಾಳಂ ಭಾಷೆಯಲ್ಲಿ ಹಿಡಿತವಿರುವುದರಿಂದ ಅವರು ಕನ್ನಡಕ್ಕೆ ಮಲಯಾಳಂ ಕಥೆಗಳನ್ನು ತಂದುಕೊಟ್ಟವರು. ದಮಯಂತಿ, ಕಮಲಾದಾಸ್ ಕತೆಗಳು, ಮಾಫಿಯಾ ಮುಂತಾದವು ಅವರ ಪ್ರಕಟಿತ ಕೃತಿಗಳು.

ಕಾಫಿತೋಟವನ್ನು ಮಾರಿ ಮದ್ರಾಸಿನಲ್ಲಿ ಕಟ್ಟಡ ಕಟ್ಟಿದರೆ ಹೇಗೆಂದು ನಾನು ಮತ್ತು ಅವಳು ಯೋಚಿಸುತ್ತಿದ್ದೇವೆ.' ಮೇನೋನ್ ಹೇಳಿದ.

'ಮೋಹನ್ ಈಗ ಮೈನರ್. ಅವನು ಬೆಳೆದು ಮೇಜರಾದ ನಂತರ ತಾನೆ ತೋಟವನ್ನು ಮಾರಬೇಕೋ ಬೇಡವೋ ಎಂದು ನಿರ್ಧರಿಸಬೇಕಾಗಿದ್ದು?' ಮದರ್ ಮತ್ತೊಂದು ಪ್ರಶ್ನೆ ಹಾಕಿದರು.

'ಅಲ್ಲ ಮದರ್, ಅವನ ಹೆಸರಿನಲ್ಲಿ ಕಟ್ಟಡಗಳನ್ನು ಕೊಳ್ಳಬಹುದಲ್ವೇ?' ಮೇನೋನ್ ಹೇಳಿದ.

'ಅದು ಕೂಡ ಸರಿಯಲ್ಲ. ಮಗುವಿನ ಒಳಿತಿಗಾಗಿ ನೀವು ಕೆಲಸ ಮಾಡುತ್ತೀರೆಂಬುದರಲ್ಲಿ ನನಗೆ ನಂಬಿಕೆಯಿಲ್ಲ. ಮಗು ನಮ್ಮ ಜೊತೆ ಬಹುತೇಕ ಒಂದು ವರ್ಷದಿಂದ ಇದ್ದಾನೆ. ಈ ತನಕ ಅವನನ್ನು ಮನೆಗೆ ಕರೆದುಕೊಂಡು ಹೋಗಿಲ್ಲ. ಅಷ್ಟೇ ಅಲ್ಲ ಮಿ. ಮೇನೋನ್ ನೀವು ಒಮ್ಮೆಯಾದರೂ ಬಂದು ನೋಡಲೂ ಇಲ್ಲ' ಮದರ್ ಹೇಳಿದರು.

'ಅವನ ತಾಯಿ ತೀರಿಕೊಂಡು ಎರಡು ವಾರ ಕಳೆದ ಕೂಡಲೇ, ಎಲ್ಲ ಪಿತೃಕ್ರಿಯೆಗಳನ್ನು ಮುಗಿಸಿ, ಇವನನ್ನು ಇಲ್ಲಿಗೆ ಕರೆತಂದ್ವಿ. ಅಮ್ಮನಿಲ್ಲದ ಮನೆಗೆ ಅವನನ್ನು ರಜೆಯಲ್ಲಿ ಕರೆದುಕೊಂಡು ಹೋದರೆ ಅವನು ದುಃಖಿಸಿ ಹಾಸಿಗೆ ಹಿಡಿಯುತ್ತಾನೆಂದು ನಾನು ಭಯಪಟ್ಟೆ. ಅಮ್ಮನನ್ನು ಮರೆತ ನಂತರ ಮನೆಗೆ ಕರೆದುಕೊಂಡು ಹೋಗೋಣವೆಂದು ನಾನು ಅಂದುಕೊಂಡೆ' ಮೇನೋನ್ ಹೇಳಿದ. ಆತನಿಗೆ ತನ್ನ ಗಂಟಲ ಪಸೆಯಾರುತ್ತಿದೆಯೆಂದನಿಸಿತು.

ಮದರ್ ಕಿಟಕಿಯ ಬಳಿ ಬಂದು ಹೊರ ನೋಡಿದರು.

'ಮೇರಿ, ಎರಡು ಲೋಟ ಚಹ ಎರಡು ತುಣುಕು ಕೇಕನ್ನು ಇಲ್ಲಿಗೆ ತರಲು ಅಡಿಗೆಯವಳಿಗೆ ಹೇಳು' ಒದ್ದೆ ಬಟ್ಟೆಯನ್ನು ಒಣಗಿಸಲು ಮರಕ್ಕೆ ಹಗ್ಗವನ್ನು ಕಟ್ಟಲು ಪ್ರಯತ್ನಿಸುತ್ತಿದ್ದ ಹೆಣ್ಣು ಮಗಳು ಓಡಿ ಮರೆಯಾದಳು.

'ಮೋಹನ ಖಂಡಿತವಾಗಿಯೂ ಅವನ ತಾಯಿಯನ್ನು ಮರೆಯಲಾರ. ಅವನಿಗೆ ತಾಯಿಯಿಂದ ಒಮ್ಮೆ ಲಭಿಸಿದ ಪ್ರೀತಿಯನ್ನು ಅವನು ಮರೆಯಲಾರ. ಪ್ರತಿದಿನ ಅವನು ತನ್ನ ಅಮ್ಮನ ಶಾಂತಿಗೋಸ್ಕರ ಮಂಡಿಯೂರಿ ಪ್ರಾರ್ಥಿಸುತ್ತಿರುತ್ತಾನೆ" ಮದರ್ ನುಡಿದರು.

ಅವರು ಬೀಟೆಮರದಲ್ಲಿ ನಿರ್ಮಿಸಿದ ಎತ್ತರದ ಖುರ್ಚಿಯಲ್ಲಿ ಆಸೀನರಾದರು.

'ಕೂತ್ಕೊಳಿ ಮಿಸ್ಟರ್ ಮೇನೋನ್, ನೀವೂ ಕೂತ್ಕೊಳಿ ಮಿಸೆಸ್ ಮೇನೋನ್'

'ಥ್ಯಾಂಕ್ಸ್' ಮೇನೋನ್ ಹೇಳಿದ. ದಂಪತಿಗಳು ಭಯಚಕಿತರಾದಂತೆ ಮುದುಡಿ ಕುಳಿತುಕೊಂಡರು.

'ನೀವು ಇವರನ್ನು ಮೋಹನನಿಗೆ ಏನೆಂದು ಪರಿಚಯಿಸುತ್ತೀರಿ ಮಿಸ್ಟರ್ ಮೇನೋನ್' ಮದರ್ ಕೇಳಿದರು.

'ಹೊಸ ಅಮ್ಮ ಅಂತ ಹೇಳಬೇಕೂಂತ ಪ್ಲಾನ್ ಮಾಡ್ಕೊಂಡಿದ್ವಿ. ಇನ್ನು ನೀವು ಹೇಳಿದಂತೆ ಮದರ್' ಮೇನೋನ್ ಹೇಳಿದ.

'ನಾನು ಅಧ್ಯಾಪಕಿ. ಸಾಮಾನ್ಯವಾಗಿ ಮಕ್ಕಳಿಗೆ ನನ್ನನ್ನು ಕಂಡರೆ ತುಂಬಾ ಪ್ರೀತಿ. ನನ್ನ ವಿಷಯವೇ ಮಕ್ಕಳ ಮನಃಶಾಸ್ತ್ರ' ಮೇನೋನ್ನಿನ ಪತ್ನಿ ನುಡಿದರು.

'ಹೌದು ಮಕ್ಕಳ ಸೈಕಾಲಜಿಯಲ್ಲಿ ಲೀಲಾಳಿಗೆ ಡಾಕ್ಟರೇಟ್ ಸಿಕ್ಕಿದೆ. ಮೋಹನನಿಗೆ ಸಾಕಷ್ಟು ಆಟಿಕೆಗಳನ್ನು ಕೊಂಡು ತಂದಿದ್ದೇವೆ. ಅವನು ಬಂದರೆ ಎಲ್ಲವನ್ನೂ ಕಾರಿನಿಂದ ತಂದುಕೊಡುತ್ತೇವೆ. ಎಲ್ಲವನ್ನೂ ಆಯ್ಕೆ ಮಾಡಿದ್ದು ಲೀಲಾಳೇ. ನಾಲ್ಕು ವರ್ಷ ವಯಸ್ಸಿನ ಮಗುವಿನ ಮಾನಸಿಕ ಬೆಳವಣಿಗೆಗೆ